

# ದೇವತೆಯ ತುತ್ತೂರಿ

ದಕ್ಷಿಣ ಅಮೆರಿಕ ಮೂಲದ ಕುಸುಮವೆಂದು ಗುರುತಿಸಲ್ಪಟ್ಟ ಏಂಜೆಲ್ಸ್ ಟ್ರಂಪೆಟ್ (ದೇವತೆಯ ತುತ್ತೂರಿ) ಹೂವು ಮನೆಯಂಗಳದ ಅಲಂಕಾರಿಕ ಹೂವಾಗಿಯೂ ಪ್ರಸಿದ್ಧಿ ಪಡೆದಿದೆ. ‘ಬ್ರಗ್‌ಮಾನ್ಸಿಯ ಸುವೆಲೆನ್ಸ್’ **(brugmansia suavelens)** ಎಂಬ ಸಸ್ಯಶಾಸ್ತ್ರೀಯ ಹೆಸರು ಈ ಗಿಡದ್ದು. ಇದರ ಎಲ್ಲಾ ಭಾಗಗಳೂ ವಿಷಕಾರಿ ಎನ್ನಲಾಗುತ್ತದೆ.

ಇದು ನಿತ್ಯ ಹರಿದ್ವರ್ಣದ ಸಸ್ಯವಾಗಿದ್ದು, ಸುಮಾರು 8 ಅಡಿಯಷ್ಟು ಎತ್ತರ ಬೆಳೆಯುತ್ತದೆ. ಇದರಲ್ಲಿ ಬಿಳಿ, ಹಳದಿ, ಕಿತ್ತಲೆ, ಗುಲಾಬಿ, ಹಸಿರು ವರ್ಣದ ವಿವಿಧ ತಳಿಗಳನ್ನು ಕಾಣಬಹುದು. ಇದರ ಕೆಲ ತಳಿಯ ಹೂವುಗಳು 20 ಇಂಚು ಉದ್ದ ಇರುತ್ತವೆ. ಸಹಜವಾಗಿ ರಾತ್ರಿ ಅರಳಿ ಮುಂಜಾನೆಯವರೆಗೂ ನಳನಳಿಸುವ ಹೂವುಗಳು ಬಿಸಿಲೇರಿದಂತೆ ಮುದುಡುತ್ತವೆ. ಅಪ್ಪಿತಪ್ಪಿ ಈ ಗಿಡದ ಭಾಗಗಳನ್ನು ಬಾಯಿಗಿಟ್ಟರೆ ನೆನಪಿನ ನಾಶ ಮತ್ತು ಪಾರ್ಶ್ವವಾಯು ಸಂಭವಿಸುವುದು ಖಂಡಿತ ಎನ್ನಲಾಗುತ್ತದೆ. ಈ ಬಗ್ಗೆ ಎಚ್ಚರ ಅಗತ್ಯ.

‘ಹಸುವಿನ ತುರಿಕೆ’ ಎಂದೂ ಕರೆಯಲಾಗುವ ಈ ಸಸ್ಯವನ್ನು ಜಾನುವಾರುಗಳು ಮೂಸಿಯೂ ನೋಡುವುದಿಲ್ಲ. ಅತಿಯಾದ ಆರೈಕೆ ಬೇಡದ ಈ ಗಿಡವನ್ನು ಮನೆಯಂಗಳದಲ್ಲಿ ಅಲಂಕಾರಕ್ಕಾಗಿ ಬೆಳೆಸಬಹುದು. ಕಹಳೆಗಳ ರೂಪದಲ್ಲಿ ಗೊಂಚಲು ಗೊಂಚಲುಗಳಾಗಿ ಅರಳುವ ಹೂವುಗಳು ಮನೆ ಮುಂದಣದ ಅಂಗಳಕ್ಕೆ ಶೋಭೆ ನೀಡುತ್ತವೆ.

—ಕೆ. ರಾಮಕೃಷ್ಣ, ಸೀಬಿನಕೆರೆ, ತೀರ್ಥಹಳ್ಳಿ

# ಬ್ರಹ್ಮಕಮಲ

ಬ್ರಹ್ಮಕಮಲವು ರಾತ್ರಿ ಅರಳಿ ರಾತ್ರಿಯೇ ಬಾಡುವ ಅಪರೂಪದ ಘಮ ಸುಮ. ಬ್ರಹ್ಮಕಮಲ ಮತ್ತು ಕಮಲ ಒಂದೇ ತರಹ ಇದ್ದರೂ ಬಣ್ಣದಲ್ಲಿ ಬೇರೆ ಬೇರೆ. ಈ ಹೂವಿನ ಮೇಲೆ ಬ್ರಹ್ಮ ಪೀಠಸ್ಥನಾದ ಕಾರಣಕ್ಕೆ ಬ್ರಹ್ಮಕಮಲ ಎಂದು ಹೆಸರು ಬಂದಿದೆ.

ಈ ಹೂವನ್ನು ನೋಡಿದರೆ ಅದೃಷ್ಟ ಕುಲಾಯಿಸುತ್ತದೆ ಎಂಬ ನಂಬಿಕೆ ಇದೆ. ಈ ಗಿಡವು ಔಷಧಯುಕ್ತವೂ ಹೌದು. ಇದರ ಒಂದು ಎಲೆಯನ್ನು ಎಲ್ಲಿ ನೆಟ್ಟರೂ ಬೆಳೆಯುತ್ತದೆ. ಹಸಿರು ದಿಂಡಿನಲ್ಲಿ ಹಲವು ಎಲೆಗಳು ಮೂಡಿ ಎಲೆಯೊಂದರಲ್ಲಿ ಮೊಗ್ಗುಗಳು ಬಿರಿದು ಅರಳಿ ಮನಸ್ಸಿಗೆ ಮುದ ನೀಡುತ್ತವೆ. ಗಿಡವೊಂದರಲ್ಲಿ ವರ್ಷಕ್ಕೊಮ್ಮೆಯಷ್ಟೇ ಹೂ ಬಿಡುವುದು ಇದರ ವಿಶೇಷ. ನಮ್ಮ ಮನೆಯ ಕಾಂಪೌಂಡ್‌ನಲ್ಲಿ ಬೆಳೆದಿರುವ ಬ್ರಹ್ಮಕಮಲದ ಒಂದು ಹಸಿರು ಎಲೆಯಲ್ಲಿ ಶ್ವೇತವರ್ಣದ ಐದು ಸುಮಗಳು ಅರಳಿ ವಿಸ್ಮಯಗೊಳಿಸಿದವು.

—ಪ. ಚಂದ್ರಕುಮಾರ, ಗೌನಹಳ್ಳಿ







